ಶ್ರೀ ಕೆ. ಎಂ. ತಮ್ಮಯ್ಯ.—ಸ್ವಾಮಿ, ತಾವು ನನ್ನ ಕಾಲ್ ಅಟೆನ್‌ಷನ್ ನೋಟೀಸಿಗೆ ಉತ್ತರವನ್ನು ಕೊಡುತ್ತಾ, ಅಪಷನರ್ಸ್ ಕಾಂಬಿನೇಷನ್ ಅಧಾರದಮೇಲೆ ಮೆಡಿಕಲ್ ಕಾಲೇಜುಗಳಲ್ಲಿ ಸೀಟು ಗಳನ್ನು ಅಲಾಟ್ ಮಾಡಿದ್ದೇವೆ ಎಂದು ಹೇಳಿದ್ದೀರಿ, ಈಗ ಬೆಡ್ ಸ್ಟೈಂತ್ ಅಧಾರದಮೇಲೆ ಸೀಟು ಗಳನ್ನು ಹಂಚುತ್ತೇವೆ ಎಂದು ಹೇಳಿತ್ತಿದ್ದೀರಿ, ಅದ್ದರಿಂದ ಅಪ್‌ಷನರ್ಸ್, ಕಾಂಬಿನೇಷನ್, ಬೆಡ್ ಸ್ಟೈಂತ್ ಇತ್ಯಾದಿ ಅಧಾರಗಳಮೇಲೆ ಸೀಟು ಹಂಚುವುದನ್ನು ಬಿಟ್ಟು ನ್ಯೂಡೆಂಟ್ಸ್ ಪಾಪ್ಯುಲೇಷನ್ ಅಧಾರದಮೇಲೆ ಸೀಟು ಹಂಚಿಕೆ ಮಾಡುವಂತೆ ಇಂಡಿಯನ್ ಮೆಡಿಕಲ್ ಕೌನ್ಸಿಲ್ಲಗೆ ಶಿಫಾರಸ್ಸು ಮಾಡುತ್ತಿರಾ ?

Sri Y. RAMAKRISHNA.—This is one of the suggestions and I will bear it in mind.

Shortage of Staff and Vehicles in Excise Department of S. K. District

177. Sri S. JAYAPRAKASH SHETTY (Brahmavar).—

Will the Minister for Finance, Planning and Youth Welfare be pleased to state:—

(*a*) the District in the State where the excise income is more;

(*b*) the strength of staff in different cadres in the excise department of South Kanara District and the No. of vehicles provided to this department at the District level;

(*c*) whether they are aware that there is a possibility of excise revenue being reduced substantially to Government during the next auctions as the Excise Department cannot work efficiently for want of staff and vehicles facilities and thereby the contractors are suffering heavy loss ?

Sri RAMAKRISHNA HEGDE (Minister for Finance, Planning and Youth Welfare).—

(*a*) Bangalore

(*b*)

District Excise Officer	...	1
Excise Inspectors	...	11
Asst. Excise Inspectors	...	23
I Division Clerks	...	2
II Division Clerks	...	19
Typist	...	1
Driver	...	1
Class IV Servants	...	102
Total	...	160
Vehicle Jeep		1

(*c*) No.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—ಸ್ವಾಮಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಸೇಂದಿ ಮತ್ತು ಷರಾಬ್ ಅಂಗಡಿಗಳಿವೆ ಎಂಬುದನ್ನು ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅದರ ಲೆಕ್ಕವನ್ನು ಕೊಡುವುದು ಕಷ್ಟ.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—ಸಿಬ್ಬಂದಿ ಕಡಿಮೆ ಇರುವುದರಿಂದ ಎಕ್ಸೈಜ್ ಕಂಟ್ರಾಕ್ಟರು ಗಳು ಪ್ರೈವೇಟ್ ಜನಗಳನ್ನು ಕರೆದುಕೊಂಡು ಕೆಲಸ ಮಾಡಿಸುತ್ತಿದ್ದಾರೆ. ಇದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ಸಿಬ್ಬಂದಿಯನ್ನು ಹೆಚ್ಚು ಮಾಡಿದ್ದೇವೆ. ಮೊದಲು ನಾಲ್ಕನೇ ದರ್ಜೆಯವರು 80 ಜನರು ಇದ್ದರು. ಅದನ್ನು ಈಗ 102ಕ್ಕೆ ಏರಿಸಿದ್ದೇವೆ. ಸೆಕೆಂಡ್ ಡಿವಿಜನ್ ಕ್ಲಾರ್ಕ್ಸ್ ಮೊದಲು 18 ಜನರು ಇದ್ದರು. ಅದನ್ನು 19ಕ್ಕೆ ಏರಿಸಿದ್ದೇವೆ. ಎಕ್ಸೈಜ್ ಅಸಿಸ್ಟೆಂಟ್ ಇನ್‌ಸ್ಪೆಕ್ಟರುಗಳು 15 ಜನರು ಇದ್ದರು. ಅದನ್ನು 23ಕ್ಕೆ ಏರಿಸಿದ್ದೇವೆ. ಎಕ್ಸೈಜ್ ಇನ್‌ಸ್ಪೆಕ್ಟರುಗಳನ್ನು 10 ಇದ್ದದ್ದನ್ನು 11ಕ್ಕೆ ಏರಿಸಿದ್ದೇವೆ. ಅವರಿಗೆ ಎಷ್ಟು ಸಿಬ್ಬಂದಿ ಬೇಕೋ ಅಷ್ಟು ಸಿಬ್ಬಂದಿಯನ್ನು ಸ್ವಲ್ಪ ಹೆಚ್ಚು ಕಡಿಮೆ ನೇಮಿಸಿದ್ದೇವೆ. ಆದ್ದರಿಂದ ಅಲ್ಲಿ ಸಿಬ್ಬಂದಿಯ ತೊಂದರೆಯೇನೂ ಇಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಸ್ವಾಮಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಬಕಾರಿ ಇಲಾಖೆಯವರು ಕಳ್ಳಬಟ್ಟಿ ತಯಾರು ಮಾಡತಕ್ಕ ಜನರನ್ನು ಹಿಡಿಯುವುದನ್ನು ಬಿಟ್ಟು ನಿರಪರಾಧಿಗಳನ್ನು ಹಿಡಿದು ಅವರನ್ನು ಹೊಡೆಯುತಕ್ಕದ್ದು, ಬಡಿಯುತಕ್ಕದ್ದು ಸಾಕಷ್ಟು ಜಾಸ್ತಿಯಾಗುತ್ತಿದೆ. ಆದ್ದರಿಂದ ಅದನ್ನು ರದ್ದುಮಾಡಿ ನಿಜವಾಗಿ ಕಳ್ಳಬಟ್ಟಿ ತಯಾರು ಮಾಡತಕ್ಕವರಿಗೆ ಉಗ್ರ ಶಿಕ್ಷೆ ಮಾಡುವುದಕ್ಕೆ ಕ್ರಮ ಕೈಕೊಳ್ಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಉದ್ದೇಶ ನಿಜವಾಗಿ ಕಳ್ಳಬಟ್ಟಿ ತಯಾರಿಸುವವರನ್ನು ಹಿಡಿಯುವುದು. ಅದು ಆ ರೀತಿ ಆಗದಿದ್ದರೆ ಅದನ್ನು ದುರಸ್ತು ಮಾಡುವುದಕ್ಕೆ ಪ್ರಯತ್ನ ಮಾಡೋಣ.

Smt. WINNIFRED F. FERNANDES.—Has it not come to the notice of the Government that the Excise squad is taking the assistance of College students and they are raiding the houses during mid-nights and the people are severely beaten, and if so, what action is proposed to to be taken by Government?

Sri RAMAKRISHNA HEGDE.—I am not aware that Excise squad are taking the assistance of College students. I will certainly enquire, and if it is proved, then I will take necessary action.

ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ವಾಮಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇಂದಿ ಮತ್ತು ಷರಾಬ್ ಕಂಟ್ರಾಕ್ಟರುಗಳು ಎಕ್ಸೈಜ್ ಆಫೀಸರ ಸಹಾಯವನ್ನು ಪಡೆದು ನಿಜವಾದ ಹೆಂಡವನ್ನು ಮಾರಾಟ ಮಾಡುವುದಕ್ಕಿಂತ ಹೆಚ್ಚಿಗೆ ಕಳ್ಳಬಟ್ಟಿ ಸಾರಾಯಿಯನ್ನು ಮಾರಾಟ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಮತ್ತು ಈ ಸೇಂದಿ ಕಂಟ್ರಾಕ್ಟರು ಕೆಲವು ಮರಗಳಿಗೆ ಸರ್ಕಾರಕ್ಕೆ ಕೊಡಬೇಕಾದ ಫೀಜನ್ನು ಕೊಡದೆ ಹೆಂಡವನ್ನು ಟ್ಯಾಪ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಎರಡನೆಯದು ಸರ್ಕಾರದ ಗಮನಕ್ಕೆ ಬಂದಿಲ್ಲ. ಮೊದಲನೆಯ ಪ್ರಕಾರದಲ್ಲಿ ಕಳ್ಳಬಟ್ಟಿ ಸಾರಾಯಿಯನ್ನು ಕಂಟ್ರಾಕ್ಟರು ಹೆಚ್ಚಿಗೆ ಮಾರಾಟ ಮಾಡುತ್ತಾರೆ ಎನ್ನತಕ್ಕಂಥಾದ್ದು ಅಷ್ಟೊಂದು ನಿಜವಲ್ಲ ಎಂದು ಕಾಣುತ್ತದೆ. ಏತಕ್ಕೆಂದರೆ ಅಲ್ಲಿ ಎಷ್ಟು ಸೇಂದಿ ವ್ಯಾಪಾರವಾಗುತ್ತದೆ ಎನ್ನತಕ್ಕ ಅಂಕಿ ಅಂಶಗಳನ್ನು ನಾವು ತರಿಸುತ್ತಿದ್ದೇವೆ. ಅದು 2-3 ತಿಂಗಳ ಹಿಂದೆ ಕಡಿಮೆ ಇದ್ದದ್ದು ನಿಜ. ಆದರೆ ಕಳೆದ ಒಂದೂವರೆತಿಂಗಳಿಂದ ಪುನಃ ಅದರ ವ್ಯಾಪಾರ ಹೆಚ್ಚಾಗುತ್ತಿದೆ. ಹಿಂದಿನ ಮಟ್ಟಕ್ಕೆ ಬರುತ್ತಿದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ್ದು ನಿಜ ಎಂದು ಅನಿಸುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊದಲನಿಂದಲೂ ಪ್ರಸಿದ್ಧಿಯಾಗಿ ಕಳ್ಳಬಟ್ಟಿ ಸಾರಾಯಿಯನ್ನು ಮಾರಾಟ ಮಾಡುತ್ತಿದ್ದಾರೆ. ಹಿಂದೆ ಅದರ ಸಂಖ್ಯೆ ಹಾಸ್ತಿಯಾಗಿ ಅನೇಕರ ಮೇಲೆ ತಾವು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ. ಈಗ ತಾವು ಈ ವಿಚಾರದಲ್ಲಿ ದುಷ್ಟರನ್ನು ರಕ್ಷಣೆ ಮಾಡಿ ಶಿಷ್ಟರನ್ನು ಶಿಕ್ಷೆ ಮಾಡತಕ್ಕಂಥ ನೀತಿಯನ್ನು ಅನುಸರಿಸುತ್ತಿದ್ದೀರಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಶಿಷ್ಟರನ್ನು ರಕ್ಷಿಸಿ, ದುಷ್ಟರನ್ನು ಶಿಕ್ಷಿಸುವುದು ನಮ್ಮ ಉದ್ದೇಶ.

ಶ್ರೀ ಬಾಪುಗೌಡ.—ಸೇಂದಿಗೆ ಒಂದು ವಿಧವಾದ ಔಷಧಿಯನ್ನು ಸೇರಿಸಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಒಂದು ವೇಳೆ ಅದು ಸರ್ಕಾರದ ಗಮನಕ್ಕೆ ಬಂದಿದ್ದರೆ ಆ ಬಗ್ಗೆ ಯಾವ ಕ್ರಮವನ್ನು ಸರ್ಕಾರದವರು ತೆಗೆದುಕೊಂಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಜನರಲ್ ಪ್ರಶ್ನೆ ಆಯಿತು. ಮಾನ್ಯ ಸದಸ್ಯರು ಹೇಳಿದ ವಿಚಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಷ್ಟೊಂದು ಇಲ್ಲ. ಕೆಲವು ಕಡೆ ಇಂಥಾ ದೂರು ಬಂದದ್ದು ನಿಜ. ಆ ಬಗ್ಗೆ ಸರ್ಕಾರದವರು ಸೂಕ್ತವಾದ ಕ್ರಮವನ್ನು ತೆಗೆದುಕೊಂಡಿದ್ದಾರೆ. ಕೆಲವು ಕಡೆ ಏನು ಹೇಳುತ್ತಾರೆ ಎಂದರೆ ಸೇಂದಿಗೆ ಯಾವುದೋ ಒಂದು ದ್ರವವನ್ನು ಸೇರಿಸಿದರೆ ಅದರಿಂದ ಅದನ್ನು ಕುಡಿದವರಿಗೆ ಒಂದು ತರಹ ಕಿಕ್ ಬರುತ್ತದೆ, ಅದ್ದರಿಂದ ಗಿರಾಕಿಗಳೇ ಅದನ್ನು ಬಯಸುತ್ತಾರೆ ಎಂದು ಅದ್ದರಿಂದ ಇದರ ಬಗ್ಗೆ ಸರ್ಕಾರದವರು ಸೂಕ್ತವಾಗಿ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಾರೆ.

Number of Government Ayurvedic Colleges in the State

185. Sri C. M. CHURCHIHALMTH (Mundargi).—

Will the Minister for Health be pleased to state :—

(*a*) the number of Government Ayurvedic Colleges in the State ;

(*b*) the places where they are existing ;

(*c*) the number of principals who served in the said colleges so far together with the names of principals who are working now (Detailed information may please be furnished) ;

(*d*) whether the Government has contemplated to appoint a separate director for Ayurveda ;

(*e*) whether it is a fact that some degrees of Shuddha Ayurveda have been included in integrated scheme ;

(*f*) if so, the reason for not including the integrated practitioners registered in Bombay during 1941 under that Scheme ;

(*g*) whether it has come to the notice of Government that the persons who have passed D. S. A. C., are being registered in the integrated list in Bombay State ?

Sri G. BASAVANNAPPA (Deputy Minister for Health).—

(*a*) Two.

(*b*) Mysore and Bangalore.

(*c*) From the date of starting the college in 1968 Dr. S. Venkatanarayana Rao was the principal of the Mysore Ayurvedic College. He